## ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯ ಕಾರ್ಯ ಪ್ರಗತಿಯ ಬಗ್ಗೆ ದಿನಾಂಕ: 20.07.2016ರಂದು ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು :**

1. ಶ್ರೀ ಡಿ.ಎನ್. ನರಸಿಂಹರಾಜು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ ಜಿ.ಸಿ. ವೃಷಭೇಂದ್ರಮೂರ್ತಿ, ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ
3. ಶ್ರೀ ಶ್ರೀನಿವಾಸ್, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಕೆ.ಆರ್. ವೃತ್ತ, ಬೆಂಗಳೂರು.
4. ಶ್ರೀ ಆರ್.ಎಲ್. ವೆಂಕಟೇಶ್, ಅಧೀಕ್ಷಕ ಅಭಿಯಂತರರು, ಕಟ್ಟಡಗಳ ವೃತ್ತ, ಬೆಂ.
5. ಶ್ರೀ ಇ.ದೊಡ್ಡನಾಗಯ್ಯ, ಕಾರ್ಯಪಾಲಕ ಅಭಿಯಂತರರು, ನಂ.1, ಕಟ್ಟಡಗಳ ವಿಭಾಗ, ಬೆಂ.
6. ಶ್ರೀ ಸಿದ್ಧರಾಮು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಟ್ಟಡಗಳ ವಿಭಾಗ, ಬೆಂ.
7. ಶ್ರೀ ರಾಮಲಿಂಗಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಉಪವಿಭಾಗ, ಬೆಂಗಳೂರು.
8. ಶ್ರೀಮತಿ ಶ್ರೀದೇವಿ, ಉಪ ವಾಸ್ತುಶಿಲ್ಪಿಗಳು, ಬೆಂಗಳೂರು.
9. ಶ್ರೀ ಶಂತನು, ಎನ್.ಐ.ಸಿ. ಬೆಂಗಳೂರು.

ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯ ಪ್ರಗತಿಯ ಬಗ್ಗೆ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ತದನಂತರ ದಿ: 16-2-2016ರಂದು ಆಯೋಗದ ನೂತನ ಕಟ್ಟಡದ ಎಲ್ಲಾ ಮಹಡಿಗಳಲ್ಲಿ ಡಾಟಾ ಪಾಯಿಂಟ್‌ಗಳನ್ನು ಅಳವಡಿಸುವ ಬಗ್ಗೆ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಬೆಂಗಳೂರು ಇವರಿಗೆ ಇ.ಮೇಲ್ ಕಳುಹಿಸಲಾಗಿತ್ತು. ಅದರಂತೆ, ಎಲ್ಲಾ ಪಾಯಿಂಟ್‌ಗಳನ್ನು ಅಳವಡಿಸಲಾಗಿದೆಯೆಂದು ವಿದ್ಯುತ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ನ್ಯಾಯಾಲಯಗಳಲ್ಲಿ ಆಯುಕ್ತರು ಕುಳಿತುಕೊಳ್ಳುವ ಆಸನಕ್ಕೆ ತಕ್ಕಂತೆ Data Nodes.ಅನ್ನು ಸರಿ ಮಾಡಬೇಕೆಂದು ತಿಳಿಸಿರುತ್ತಾರೆ.

ಶ್ರೀ ಶಂತನು, ಎನ್.ಐ.ಸಿ. ರವರು ಮಾತನಾಡುತ್ತಾ, ಎಲ್ಲಾ ಕೋರ್ಟ್ ಹಾಲ್‌ಗಳಿಗೆ ಸೂಕ್ತ ಸ್ಥಳದಲ್ಲಿ ವಿ.ಸಿ. ಅಳವಡಿಸಬೇಕಾಗಿದ್ದು, ವಿ.ಸಿ. ಪರದೆಯು ಸ್ಪಷ್ಟವಾಗಿ ಆಯುಕ್ತರು ಕೂರುವ ಸ್ಥಳಕ್ಕೆ ಕಾಣುವಂತೆ ನೋಡಿ ಮಾಡಬೇಕೆಂದು ತಿಳಿಸಿದರು. ಅದಕ್ಕೆ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ದಿ: 28 ಮತ್ತು 29ನೇ ಜುಲೈ 2016ರಂದು ಸಿಹೆಚ್-1ರಲ್ಲಿ ವಿ.ಸಿ. ನಡೆಯಲಿದ್ದು,

ಸದರಿ ವಿ.ಸಿ.ಗೆ ಬಂದು ಅದನ್ನು ವೀಕ್ಷಿಸಿ ದೂರವನ್ನು ಪರಿಶೀಲಿಸಿದ ನಂತರ ವಿ.ಸಿ. ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

ದಿ: 20-7-2016ರಂದು ಕೇಸ್‌ವಾನ್‌ದ ಪ್ರಾಜೆಕ್ಟ್ ಡೈರೆಕ್ಟರ್‌ರವರಾದ ಶ್ರೀ ಶ್ರೀನಿವಾಸ್ ರವರು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ಕಾರ್ಯದರ್ಶಿಯವರೊಂದಿಗೆ ಸಭೆ ನಡೆಸಿ, ಸದರಿ ಸಭೆಯಲ್ಲಿ ಅವರು ಪ್ರತ್ಯೇಕ SECLAN.ಅನ್ನು 5ನೇ ಹಂತದವರವರೆಗೆ ನೀಡಲಾಗಿರುವುದರಿಂದ, ಆಯೋಗದ ಕಟ್ಟಡಕ್ಕೂ ನೀಡಬಹುದು ಮತ್ತು High Band Width ಅನ್ನು ನೀಡಬಹುದು ಎಂದು ತಿಳಿಸಿದರು. ಅದರಂತೆ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಲೋಕೋಪಯೋಗಿ ಇಲಾಖೆಯವರಿಗೆ ತಾವು ಕೇಸ್‌ವಾನ್‌ರವರೊಂದಿಗೆ ಸಂಪರ್ಕದಲ್ಲಿದ್ದು SECLAN (two lines of two different paths) ಅನ್ನು ಎರಡನೆ ಮಹಡಿಯ ಸರ್ವರ್ ರೂಮ್‌ಗೆ ಅಳವಡಿಸಲು ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರು ಅವರ ಪತ್ರ ದಿನಾಂಕ: 2-7-2016ರಲ್ಲಿ ಈ ಕೆಳಕಂಡ ವಿವರಗಳಂತೆ ಕಾಮಗಾರಿಗಳು ಮುಗಿಯುವ ಹಂತದಲ್ಲಿರುವುದಾಗಿ ತಿಳಿಸಿರುತ್ತಾರೆ.

1. Internal Electrification with point wiring for light points, plug points, power plug points, switch boards, lighting fixtures, ceiling fan, exhaust fan, control panels, etc as necessary.
2. Air conditioners
   Split Type - 2TR Capacity – 2Nos.
   Cassette Type – 2TR Capacity – 4 Nos.
   Cassette Type - 3TR Capacity – 4 Nos.
3. 315KVA Transformer, HT Sub station, Main control panels, Distribution panels etc.,
4. 250 KVA Diesel Generator set
5. 13 Passenger lift – 2 Nos.
6. LAN Network : CAT – 6 Cabling with RJ45/IO-Outlets.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಯವರಿಗೆ ವಿ.ಸಿ.ಗೆ ಬೇಕಾಗುವಂತಹ ಎಲ್ಲಾ ಸಾಮಗ್ರಿಗಳನ್ನು ಒದಗಿಸುವಂತೆ ಕೋರಿ E.Governance.ಗೆ ಪತ್ರ ಬರೆಯಲು ತಿಳಿಸಿದರು.

ಮುಖ್ಯ ಇಂಜಿನಿಯರ್‌ರವರು ಸೆಪ್ಟೆಂಬರ್ ಕೊನೆಯ ವಾರದಲ್ಲಿ ಮಾಹಿತಿ ಆಯೋಗದ ಕಟ್ಟಡದ ಕಾಮಗಾರಿಯನ್ನು ಪೀಠೋಪಕರಣ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಆದಷ್ಟು ಬೇಗ ಉಳಿದ ಕೆಲಸಗಳನ್ನು ಪೂರ್ಣಗೊಳಿಸಿ ಕಟ್ಟಡವನ್ನು ಹಸ್ತಾಂತರಿಸುವಂತೆ ಹಾಗೂ ಇನ್ನು ಮುಂದೆ ಪ್ರತಿ 15 ದಿನಗಳಿಗೊಮ್ಮೆ ಕಾರ್ಯ ಪ್ರಗತಿ ವಿಮರ್ಶೆ ಮಾಡಲು ತಿಳಿಸಿದರು.

ಕ್ರಮ: ಕಾರ್ಯದರ್ಶಿ

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.